ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 557/2023

ಸಿ ಡಬ್ಲ್ಯೂ-9

ಪಿ ಡಬ್ಲ್ಯೂ- 4

ದಿಃ 07-12-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಅಜೀತ್ ನಾಯಕ |
| ತಂದೆಯ ಹೆಸರುಃ | ಗಣಪತಿ |
| ವಯಸ್ಸುಃ | 44 ವರ್ಷ |
| ಉದ್ಯೋಗಃ | ವ್ಯವಹಾರ |
| ವಿಳಾಸಃ | ಬಾವೀಕೇರಿ |

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ದಿಃ12-04-2023 ರಂದು ಬಾವೀಕೇರಿಯ ಆಲದ ಮರದ ಹತ್ತಿರ ಒಂದು ರಿಕ್ಷಾ ಬಂದು ರಸ್ತೆಯ ಬದಿಗೆ ತನ್ನ ಗಂಡನ ಜೊತೆಗೆ ನಡೆದುಕೊಂಡು ಹೋಗುತ್ತಿದ್ದ ಗರ್ಭಿಣಿ ಹೆಂಗಸಿಗೆ ಹಿಂದಿನಿಂದ ಬಂದು ಡಿಕ್ಕಿ ಹೊಡೆದಿರುತ್ತದೆ. ನಾನು ಅವರ ಮುಂದುಗಡೆ ಹೋಗುತ್ತಿದ್ದು, ಶಬ್ದವಾಗಿದ್ದು, ಕೂಗಿದ್ದನ್ನು ಕೇಳಿಸಿಕೊಂಡು ಅವರ ಹತ್ತಿರ ಓಡಿ ಹೋಗಿರುತ್ತೇನೆ. ತಕ್ಷಣ ಅವರನ್ನು ವಾಹನದ ಮುಖಾಂತರ ಅಂಕೋಲಾದ ಆರ್ಯ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಆಕೆಗೆ ತಲೆಯ ಹಿಂದುಗಡೆ ರಕ್ತ ಗಾಯವಾಗಿತ್ತು. ಆಕೆಗೆ ಪಜ್ಞೆ ಇರಲಿಲ್ಲ. ಮತ್ತೆ ಏನು ಆಗಿರುತ್ತದೆ ಎಂದು ಗೊತ್ತಾಗಿರುವುದಿಲ್ಲ. ಅಪಘಾತ

ಮಾಡಿದವರು ರಿಕ್ಷಾ ಚಾಲಕ ಎಂದು ಗೊತ್ತಾಗಿರುತ್ತದೆ. ಅದು ಪ್ಯಾಸೆಂಜರ್ ರಿಕ್ಷಾ ಆಗಿದ್ದು, ಯಾವುದು ಎಂದು ಗೊತ್ತಿರುವುದಿಲ್ಲ. ಅಲ್ಲಿ ಸೇರಿದ್ದ ಜನರು ಚಾಲಕನು ಕುಡಿದಿದ್ದನು ಎಂದು ಹೇಳಿದ್ದರು. ಈ ವಿಷಯದ ಬಗ್ಗೆ ನಾನು ಯಾರಿಗೊ ಸಹ ಹೇಳಿರುವುದಿಲ್ಲ, ಯಾರೂ ನನ್ನನ್ನು ಕೇಳಿರುವುದಿಲ್ಲ, ನಾನು ವಾಪಸ್ಸು ಬಂದು ನೋಡಿದ ನಂತರ ಸದರಿ ರಿಕ್ಷಾದ ಚಾಲಕನು ಸಾರಾಯಿ ಕುಡಿದಿದ್ದನು ಎಂದು ಹಾಗೂ ಓಡಿ ಹೋಗಿರುತ್ತಾನೆ ಎಂದು ಅಲ್ಲಿ ಸೇರಿದ್ದ ಜನರು ಹೇಳಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮತ್ತೆ ಏನನ್ನೂ ಮಾಡಿರುವುದಿಲ್ಲ. ಆರೋಪಿತರನ್ನು ಗುರುತಿಸಲು ಸಾಕ್ಷಿಯು ವಿಫಲವಾಗಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

<u>ಪಾಟಿ ಸವಾಲುಃ</u> ಮಾನ್ಯ ಎ.ಪಿ.ಪಿ.ಯವರಿಂದ

2. ಅಪಘಾತವಾದ ಸಮಯದಲ್ಲಿ ನೀವು ಆಟೋ ಸಂಖ್ಯೆ ನೋಡಿರುತ್ತೀರಿ ಎಂದರೆ ಸರಿಯಲ್ಲ. ಆಟೋ ಸಂಖ್ಯೆ ಕೆ ಎ 30 ಎ 5087 ಆಗಿತ್ತು ಎಂದರೆ ಇರಬಹುದು. ನೀವು ಅಪಘಾತ ನೋಡಿದ್ದು, ಚಾಲಕನು ಆಟೋ ರಿಕ್ಷಾವನ್ನು ನಿಲ್ಲಿಸದೇ ಓಡಿ ಹೋಗಿರುತ್ತಾನೆ ಎಂದು ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೀರಿ ಎಂದರೆ ಸರಿ. ಹಾಗುಾ ಸದರಿ ಅಪಘಾತವು ಆಟೋ ರಿಕ್ಷಾದ ಚಾಲಕನ ಅತಿ ವೇಗ ಹಾಗೂ ನಿಷ್ಕಾಳಜೀತನದ ಚಾಲನೆಯಿಂದ ಆಗಿರುತ್ತದೆ ಎಂದು ಹೇಳಿಕೆಯಲ್ಲಿ ಹೇಳಿರುತ್ತೀರಿ ಎಂದರೆ ಸರಿ. ನಿಮಗೆ ಈ

ಅಪಘಾತದ ಸಂಪೂರ್ಣ ಮಾಹಿತಿ ಇದ್ದರೂ ಸಹ ಅಪಘಾತ ಸ್ಥಳದಲ್ಲಿ ಆರೋಪಿಯನ್ನು ನೋಡಿದ್ದರೂ ಸಹ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ.ವಿ.ಎಸ್ ಇವರಿಂದಃ

3. ಆ ಶಬ್ದ ಬಂತು ಎನ್ನುವ ಸ್ಥಳದಿಂದ ನೀವು ಎಷ್ಟು ಅಂತರದಲ್ಲಿ ಮುಂದೆ ಹೋಗುತ್ತಿದ್ದೀರಿ ಎಂದರೆ ಸಾಕ್ಷಿಯು 4–5 ಅಡಿ ಅಂತರದಲ್ಲಿ ಹೋಗುತ್ತಿದ್ದೆ ಎಂದು ನುಡಿಯುತ್ತಾರೆ. ನೀವು ಒಬ್ಬರೇ ಹೋಗುತ್ತಿದ್ದೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ನಡೆದುಕೊಂಡು ಹೋಗುತ್ತಿದ್ದೇನು. ಎಲ್ಲಿ ಹೋಗುತ್ತಾ ಇದ್ದೀರಿ ಎಂದರೆ ಸಾಕ್ಷಿಯು ಶೆಟ್ಟಿಯವರ ಅಂಗಡಿಗೆ ಹೋಗುತ್ತಿದ್ದೆ ಎಂದು ನುಡಿಯುತ್ತಾರೆ. ನಿಮ್ಮ ಮನೆ ಎಲ್ಲಿ ಬರುತ್ತದೆ ಎಂದರೆ ಸಾಕ್ಷಿಯು ಅಲ್ಲಿಯೇ ಹತ್ತಿರದಲ್ಲಿ ಬರುತ್ತದೆ ಎಂದು ನುಡಿಯುತ್ತಾರೆ. ಅಪಘಾತವಾಯಿತು ಎನ್ನುವ ಸ್ಥಳವು ನಮ್ಮ ಮನೆಯ ಕಂಪೌಂಡಿನ ಗೇಟಿನ ಪಕ್ಕದಲ್ಲಿ ಇರುತ್ತದೆ. ನಿಮ್ಮ ಮನೆಗೆ ಏನೆಂದು ಕರೆಯುತ್ತಾರೆ ಎಂದರೆ ಹೆಸರು ಇರುವುದಿಲ್ಲ ಎಂದು ನುಡಿಯುತ್ತಾರೆ. ಶಿವಮ್ಮ ವಸಂತ ಕವರಿ, ಬಾಲಚಂದ್ರ ನಾಯಕ, ಉಮೇಶ ಬಿಕಾರಿಯಾ ನಾಯಕ ಇವರ ಮನೆಯು ನಿಮ್ಮ ಮನೆ ಆಗಿರುವುದಿಲ್ಲ ಎಂದರೆ ಸರಿ. ಶಬ್ದ ಬಂತು ಎಂದ ನಂತರ ನೀವು ತಿರುಗಿ ನೋಡಿದಾಗ ಆಟೋ ಎಲ್ಲಿ ಇತ್ತು ಎಂದರೆ ಸಾಕ್ಷಿಯು ಅಲ್ಲಿಯೇ ನಿಂತುಕೊಂಡಿತ್ತು ಎಂದು ನುಡಿಯುತ್ತಾರೆ. ಫಿರ್ಯಾದಿಯ ಹೆಂಡತಿಯು ಮೃತ ಶೋಭಾ ಇವರು ಎಲ್ಲಿ ಬಿದ್ದಿದ್ದರು ಎಂದರೆ ಸಾಕ್ಷಿಯು ಕಚ್ಚಾ ರಸ್ತೆಯ ಮೇಲೆ ಬಿದ್ದಿದ್ದರು ಎಂದು ನುಡಿಯುತ್ತಾರೆ.

ಆಕೆಯು ರಿಕ್ಷಾ ಹೊಡೆದ ಡಿಕ್ಕಿಯ ಪರಿಣಾಮವಾಗಿ ಉಲ್ಟಾ ಬಿದ್ದಿದ್ದು, ಕಲ್ಲು ತಲೆಗೆ ತಾಗಿರುತ್ತದೆ. ನೀವು ತಿರುಗಿ ನೋಡಿದ್ದರಿಂದ ಅಪಘಾತ ಹೇಗೆ ಆಯಿತು ಎಂದು ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ರಿಕ್ಷಾದ ಯಾವ ಭಾಗ ಮೃತಳಿಗೆ ತಾಗಿತ್ತು ಎಂದರೆ ಸಾಕ್ಷಿಯು ಮುಂದಿನ ಪೂರ್ತಿ ಭಾಗವು ಮಧ್ಯಕ್ಕೆ ಡಿಕ್ಕಿ ಹೋಡೆದಿರುತ್ತದೆ ಎಂದು ನುಡಿಯುತ್ತಾರೆ. ಮೃತ ಶೋಭಾ ಇವರ ಯಾವ ಭಾಗಕ್ಕೆ ರಿಕ್ಷಾ ಡಿಕ್ಕಿ ಹೋಡೆದಿರುತ್ತದೆ ಎಂದು ಹೇಳಲು ಆಗತ್ತದೆಯಾ ಎಂದರೆ ತಲೆಯ ಮಧ್ಯ ಭಾಗಕ್ಕೆ ಡಿಕ್ಕಿ ಹೊಡೆದಿರುತ್ತದೆ ಎಂದು ನುಡಿಯುತ್ತಾರೆ. ರಿಕ್ಷಾದ ಯಾವ ಭಾಗಕ್ಕೆ ಹಾನಿಯಾಗಿತ್ತು ಎಂದರೆ ಸಾಕ್ಷಿಯು ಗ್ಲಾಸಿನ ಕೆಳಗಡೆ ಪೂರ್ತಿಯಾಗಿ ಹಾಗೂ ಕನ್ನಡಿಯೂ ಸಹ ಹಾನಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಬಲಬದಿಯ ಕನ್ನಡಿ ಹಾನಿಯಾಗಿರುತ್ತದೆ. ರಸ್ತೆಯ ಮೇಲೆ ಏನಾದರೂ ಗುರುತು ಇದ್ದಿದ್ದರ ಬಗ್ಗೆ ನೋಡಿರುತ್ತೀರಾ ಎಂದರೆ ಸಾಕ್ಷಿಯು ರಸ್ತೆಯ ಪಕ್ಕ ಕಚ್ಚಾ ರಸ್ತೆಯ ಮೇಲೆ ಗುರುತು ಇತ್ತು ಎಂದು ನುಡಿಯುತ್ತಾರೆ. ನೀವು ಪೊಲೀಸರಿಗೆ ಯಾವಾಗ ಹೇಳಿಕೆಯನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ಅದೇ ದಿನ ರಾತ್ರಿ ಸಮಯದಲ್ಲಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಪೊಲೀಸರಿಗೆ ಏನಾದರೂ ಸ್ಥಳಕ್ಕೆ ಹೋಗಿ ಇಲ್ಲಿ ಅಪಘಾತವಾಗಿರುತ್ತದೆ ಎಂದು ತೋರಿಸಿರುತ್ತೀರಾ ಎಂದರೆ ಸಾಕ್ಷಿಯು ಮಾರನೇ ದಿನ ತೋರಿಸಿರುತ್ತೇನೆ ಎಂದು ನುಡಿಯುತ್ತಾರೆ. ಆ ದಿನ ನಿಮ್ಮ ಸಹಿಯನ್ನು ಏನಾದರೂ ಪಡೆದುಕೊಂಡಿರುತ್ತಾರೆ ಎಂದರೆ ಹೌದು ಎಂದು ನುಡಿಯುತ್ತಾರೆ.

4. ಸ್ವಲ್ಪ ವರ್ಷಗಳ ಮೊದಲು ನೀವು ಆರೋಪಿಯಾಗಿ ನ್ಯಾಯಾಲಯದ ಮುಂದೆ ಬಂದಿರುತ್ತೀರಿ ಎಂದರೆ ಸರಿ. ಅದು ಎಂತಹ ಪ್ರಕರಣ ಆಗಿತ್ತು ಎಂದರೆ ಸಾಕ್ಷಿಯು ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಮಾರುಕಟ್ಟೆಯಲ್ಲಿ ಎರಡು ಗುಂಪನ್ನು ಸೇರಿಸಿ ಹೊಡೆದಾಟ ಮಾಡಿದ್ದರಿಂದ ಪ್ರಕರಣ ಆಗಿರುತ್ತದೆ ಎಂದರೆ ಸಾಕ್ಷಿಯು ಅದರಲ್ಲಿ ನಾನು ಏನನ್ನೂ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಆ ಪ್ರಕರಣದಲ್ಲಿ ಎರಡೂ ಗುಂಪಿನ 5–6 ಜನರ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಲಾಗಿತ್ತು ಎಂದರೆ ಸರಿ. ಆ ಪ್ರಕರಣದಲ್ಲಿ ನೀವು ಮತ್ತು ವಿರುದ್ಧ ಗುಂಪಿನವರು ರಾಜಿ ಮಾಡಿಕೊಂಡು ಹೋಗಿರುತ್ತೀರಿ ಎಂದರೆ ನೆನಪಿರುವುದಿಲ್ಲ. ಆ ಪ್ರಕರಣದಲ್ಲಿ ಸುಮಾರು ಎಷ್ಟು ವರ್ಷಗಳ ಕಾಲ ಓಡಾಡಿರುತ್ತೀರಿ ಎಂದರೆ ಸಾಕ್ಷಿಯು 1–2 ತಿಂಗಳುಗಳ ಕಾಲ ಓಡಾಡಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಬೇರೆ ಪ್ರಕರಣದಲ್ಲಿಯೂ ಸಹ ಜಾಮೀನುದಾರ ಹಾಗೂ ಸಾಕ್ಷಿದಾರರಾಗಿ ಬಂದಿರುತ್ತೀರಿ ಎಂದರೆ ಸರಿ.

5. ಯಾವ ವಾಹನದಲ್ಲಿ ಮೃತಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೀರಿ ಎಂದರೆ ಸಾಕ್ಷಿಯು ಗ್ಯಾರೇಜಿಗೆ ಬಂದಂತಹ ಒಂದು ಒಮ್ನಿ ವಾಹನದಲ್ಲಿ ಕರೆದುಕೊಂಡು ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಹೇಳಿದ ಹಾಗೆ ಗಂಡ ಹೆಂಡತಿ ಹೋಗುತ್ತಿರುವಾಗ ಯಾರ ಬಲಬದಿಗೆ ಯಾರು ಇದ್ದರು ಎಂದು ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿಯು ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಅಪಘಾತವಾಯಿತು

ಎಂದು ಹೇಳುವ ಸ್ಥಳದಿಂದ ಎಷ್ಟು ಅಡಿ ಅಂತರದಲ್ಲಿ ಮೃತಳು ಬಿದ್ದಿರುತ್ತಾಳೆ ಎಂದರೆ ಸಾಕ್ಷಿಯು 2-3 ಅಡಿ ಅಂತರದಲ್ಲಿ ಬಿದ್ದಿರುತ್ತಾಳೆ ಎಂದು ನುಡಿಯುತ್ತಾರೆ. ರಾತ್ರಿ ಪೊಲೀಸರು ಬಂದಿದ್ದರು ಎಂದು ಹೇಳಿದಾಗ ಚಾಲಕನು ಸಾರಾಯಿ ಕುಡಿದಿದ್ದನು ಎಂದು ಹೇಳಿದ್ದೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಸರ್ವೀಸ್ ಸೆಂಟರ್ ಎಷ್ಟು ಅಂತರದಲ್ಲಿ ಇತ್ತು ಎಂದರೆ ಸಾಕ್ಷಿಯು ಅಪಘಾತವಾದ ಸ್ಥಳದಿಂದ 10 ಅಡಿ ಅಂತರದಲ್ಲಿ ಇತ್ತು ಎಂದು ನುಡಿಯುತ್ತಾರೆ. ನೀವು ಏನಾದರೂ ಸರ್ವೀಸ್ ಸೆಂಟರ್ ಹತ್ತಿರ ನಿಂತುಕೊಂಡು ಮಾತನಾಡುತ್ತೀದ್ದೀರಿ ಎಂದು ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಅವರು ಹೇಳಿಕೆ ಕೊಟ್ಟ ಹೇಳಿಕೆಯ ಭಾಗವನ್ನು ಓದಿ ಹೇಳಲಾಗಿ 'ನೆನ್ನೆ ದಿನಾಂಕ ದಿಃ12-04-2023 ರಂದು ........... ಮಾತನಾಡುತ್ತಿರುವಾಗ ' ಎಂದು ಏನಾದರೂ ಹೇಳಿಕೆಯನ್ನು ಕೊಟ್ಟಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಡಿ-1 ಎಂದು ಗುರುತಿಸಲಾಯಿತು. ಇಂದು ಚಾಸಾ-1 ರವರ ತಂದೆ ನ್ಯಾಯಾಲಯಕ್ಕೆ ಬಂದಿರುತ್ತಾರೆ ಎಂದರೆ ನಾನು ನೋಡಿರುವುದಿಲ್ಲ. ಚಾಸಾ-1 ರವರ ಪರಿಚಯ ಇರುತ್ತದೆ. ಅಪಘಾತವಾಯಿತು ಎನ್ನುವ ರಸ್ತೆಯು ಯಾವ ದಿಕ್ಕಿನಿಂದ ಯಾವ ದಿಕ್ಕಿಗೆ ಹಾಯ್ದಿರುತ್ತದೆ ಎಂದರೆ ಸಾಕ್ಷಿಯು ಪೂರ್ವದಿಂದ ಪಶ್ಚಿಮ ದಿಕ್ಕಿಗೆ ಹಾಯ್ದಿರಬಹುದು. ಅಪಘಾತವಾಯಿತು ಎನ್ನುವ ಸ್ಥಳವು ಅಂಕೋಲಾದಿಂದ ಬೇಲೇಕೇರಿಗೆ ಹೋಗಬೇಕಾದರೆ ಯಾವ ಕಡೆಗೆ ಆಗಿರುತ್ತದೆ ಎಂದರೆ ಸಾಕ್ಷಿಯು ಬಲಬದಿಗೆ ಆಗಿರುತ್ತದೆ ಎಂದು ನುಡಿಯುತ್ತಾರೆ.

ಅಂಕೋಲಾದಿಂದ ಬೆಲೇಕೇರಿಗೆ ಹೋಗಬೇಕಾದರೆ ಅಪಘಾತದ ಸ್ಥಳದ ಹಿಂದೆ ಒಂದು ಸ್ಪೀಡ್ ಬ್ರೇಕರ್ ಇರುತ್ತದೆ ಎಂದರೆ ಸಾಕ್ಷಿಯು ಅರ್ಧ ಕಿ.ಮೀ ಅಂತರದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಘಟನೆಯಾಯಿತು ಎನ್ನುವ ಸ್ಥಳವು ನಾಗರಕಟ್ಟೆಯ ದೇವಸ್ಥಾನದ ಎಷ್ಟು ಅಂತರದಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿಯು 10-15 ಅಡಿ ಅಂತರದಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ನೀವು ರಸ್ತೆಯ ಎಡಬದಿಗೆ ನಡೆದುಕೊಂಡು ಹೋಗುತ್ತಿದ್ದೀರಾ ಅಥವಾ ಬಲಬದಿಗೆ ಹೋಗುತ್ತಿದ್ದೀರಾ ಎಂದರೆ ಎಡಬದಿಗೆ ಹೋಗುತ್ತಿದ್ದೆ ಎಂದು ನುಡಿಯುತ್ತಾರೆ. ಎಲೆಕ್ಟ್ರಿಕ್ ಕಂಬವು ಘಟನಾ ಸ್ಥಳದಿಂದ ಎಷ್ಟು ಅಂತರದಲ್ಲಿ ಇತ್ತು ಎಂದರೆ ಸಾಕ್ಷಿಯು 2-3 ಅಡಿ ಅಂತರದಲ್ಲಿ ಇತ್ತು ಎಂದು ನುಡಿಯುತ್ತಾರೆ. ಎಷ್ಟು ಕಂಬಗಳು ಇದ್ದವು ಎಂದರೆ ಒಂದೇ ಇತ್ತು ಎಂದು ನುಡಿಯುತ್ತಾರೆ. ಡಾಂಬರು ರಸ್ತೆಯ ಅಂಚಿನಿಂದ ಎಲೆಕ್ಟ್ರಿಕ್ ಕಂಬವು ಕಚ್ಚಾ ರಸ್ತೆಯ ಮೇಲೆ ಎಷ್ಟು ಅಂತರದಲ್ಲಿ ಇತ್ತು ಎಂದರೆ ಸಾಕ್ಷಿಯ 3 ಅಡಿ ಅಂತರದಲ್ಲಿ ಇತ್ತು ಎಂದು ನುಡಿಯುತ್ತಾರೆ. ಘಟನೆಯಾಯಿತು ಎನ್ನುವ ಸಂದರ್ಭದಲ್ಲಿ ಎಷ್ಟು ಜನ ಸೇರಿದ್ದರು ಎಂದರೆ ಸಾಕ್ಷಿಯು ಬಹಳಷ್ಟು ಜನ ಸೇರಿದ್ದರು ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ಎಷ್ಟು ಜನ ಸದರಿ ಪ್ರಕರಣವನ್ನು ನೋಡಿರುತ್ತಾರೆ ಎಂದರೆ ಸಾಕ್ಷಿಯು 2-3 ಜನ ನೋಡಿರುತ್ತಾರೆ ಎಂದು ನುಡಿಯುತ್ತಾರೆ. ಯಾರು ಯಾರು ಎಂದು ಹೇಳಲು ಬರುತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಘಟನೆಯಾಯಿತು ಎನ್ನುವ ಸ್ಥಳದ ಅಕ್ಕಪಕ್ಕದಲ್ಲಿ ನಿಮ್ಮ ಸಮಾಜದವರನ್ನು ಬಿಟ್ಟು ಬೇರೆ ಸಮಾಜದವರ ಮನೆಗಳು

ಇರುತ್ತವೆ ಎಂದರೆ ಸರಿ. ಪೊಲೀಸರು ನಿಮಗೆ ವಿಚಾರಣೆ ಮಾಡಿದ ಹಾಗೆ ಬೇರೆ ಸಮಾಜದವರನ್ನು ವಿಚಾರಣೆ ಮಾಡಿರುತ್ತಾರಾ ಎಂದರೆ ಹೌದು ಎಂದು ನುಡಿಯುತ್ತಾರೆ.

(ನ್ಯಾಯಾಲಯದ ಬೆಳಗಿನ ಅವಧಿ ಮುಗಿದಿದ್ದರಿಂದ ಪಾಟೀ ಸವಾಲನ್ನು ಮಧ್ಯಾಹ್ನದ ಅವಧಿಗೆ ಮುಂದೂಡಲಾಯಿತು. )

ಮಧ್ಯಾಹ್ನದ ಅವಧಿಗೆ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ.ವಿ.ಎಸ್ ಇವರಿಂದಃ

6. ಪೊಲೀಸರು ಬೇರೆ ಸಮಾಜದ ಯಾರನ್ನು ವಿಚಾರಣೆ ಮಾಡಿರುತ್ತಾರೆ ಎಂದು ಹೇಳಲು ಆಗುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಅಪಘಾತ ಸ್ಥಳದಿಂದ ವಿದ್ಯಾತ್ ಕಂಬವು ಎಷ್ಟು ಅಂತರದಲ್ಲಿ ಇರುತ್ತದೆ ಎಂದರೆ ಸಾಕ್ಷಿಯು 15 ಅಡಿ ಇರಬಹುದು ಎಂದು ನುಡಿಯುತ್ತಾರೆ. ಸದರಿ 15 ಅಡಿ ಅಂತರವು ಅಂಕೋಲಾ ಕಡೆಗೆ ಇರುತ್ತದೆ. ವಿದ್ಯುತ್ ಕಂಬವು ಬೆಲೆಕೇರಿ ಕಡೆಗೆ ಸಮೀಪ ಏನಾದರೂ ಇತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ರಿಕ್ಷಾದ ಮಧ್ಯದ ಶೋದಲ್ಲಿ ಯಾವ ಯಾವ ಭಾಗಗಳು ಬರುತ್ತವೆ ಎಂದರೆ ಸಾಕ್ಷಿಯು ಗ್ಲಾಸ್, 2 ಹೆಡ್ ಲೈಟ್ ಮತ್ತು ಶೋ ಬರುತ್ತದೆ ಎಂದು ನುಡಿಯುತ್ತಾರೆ. ಎರಡು ಹೆಡ್ ಲೈಟ್ ಗಳ ಮಧ್ಯ ಎಷ್ಟು ಅಂತರ ಇರುತ್ತದೆ ಎಂದರೆ ಗೊತ್ತಿರುವುದಿಲ್ಲ. ರಿಕ್ಷಾದ ಎತ್ತರ ಎಷ್ಟು ಇರಬಹುದು ಎಂದರೆ ಗೊತ್ತಿರುವುದಿಲ್ಲ. ರಿಕ್ಷಾದ ಕನ್ನಡಿ ಗ್ಲಾಸ್ ನಿಂದ ಎಷ್ಟು ದೂರ ಇರಬಹುದು ಎಂದರೆ ಸಾಕ್ಷಿಯು 1-2 ಇಂಚು ಇರಬಹುದು ಎಂದು

ನುಡಿಯುತ್ತಾರೆ. ಕನ್ನಡಿಯ ಗ್ಲಾಸ್ ಏನಾದರೂ ಬಿದ್ದಿತ್ತಾ ಎಂದರೆ ಹೌದು ಎಂದು ನುಡಿಯುತ್ತಾರೆ. ಅದು ಕಚ್ಚಾ ರಸ್ತೆಯಲ್ಲಿ ಬಿದ್ದಿರುತ್ತದೆ. ನೀವು, ಚಾಸಾ-1, ಹಾಗೂ ಚಾಸಾ-11 ರವರು ಒಂದೇ ಸಮಾಜದವರು ಎಂದರೆ ಸಾಕ್ಷಿಯು ಚಾಸಾ-11 ರವರು ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಜಾತಿಯವರಿಗೆ ನಾಯಕ ಎಂದು ಹೇಳುತ್ತಿದ್ದು, ನಾಮಧಾರಿ ಇವರ ಜಾತಿಯವರಿಗೆ ನಾಯ್ಕ ಎಂದು ಹೇಳುತ್ತಾರೆ ಎಂದರೆ ಸರಿ. ಚಾಸಾ-1 ರವರು ಪರಿಹಾರಕ್ಕೆ ಅರ್ಜಿ ಹಾಕಿರುವುದು ನಿಮಗೆ ಗೊತ್ತಿರುತ್ತದೆ ಎಂದರೆ ಸರಿ. ಚಾಸಾ-1 ರವರಿಗೆ ಪರಿಹಾರ ಸಿಗಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಹೇಳುವ ಸದರಿ ಅಪಘಾತಕ್ಕೂ ಹಾಗೂ ಆಟೋ ರಿಕ್ಷಾಕ್ಕೂ ಯಾವುದೇ ಸಂಬಂಧವಿಎರುವುದಿಲ್ಲ ಎಂದರೆ ಸರಿಯಲ್ಲ. ನೀವು ಹೇಳುವ ಅಪಘಾತವು ಆಟೋ ರಿಕ್ಷಾದ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನೀವು ಹೇಳುವ ಅಪಘಾತ ಸ್ಥಳದಲ್ಲಿ ಬಸ್ ನಿಲ್ದಾಣ ಏನಾದರೂ ಇದೆಯಾ ಎಂದರೆ ಹೌದು ಎಂದು ನುಡಿಯುತ್ತಾರೆ. ಬೇಲೇಕೇರಿಗೆ ಹೋಗುವಾಗ ಅದು ಯಾವ ಕಡೆ ಬರುತ್ತದೆ ಎಂದರೆ ಎಡಬದಿಗೆ ಬರುತ್ತದೆ ಎಂದು ನುಡಿಯುತ್ತಾರೆ. ನೀವು ಹೇಳುವ ಸರ್ವೀಸ್ ಸೆಂಟರ್ ಯಾವ ಕಡೆಗೆ ಬರುತ್ತದೆ ಎಂದರೆ ಅದೂ ಸಹ ಎಡಬದಿಗೆ ಬರುತ್ತದೆ ಎಂದು ನುಡಿಯುತ್ತಾರೆ. ಸರ್ವೀಸ್ ಸೆಂಟರಿನಿಂದ ನೀವು ಹೇಳುವ ಅಪಘಾತ ಸ್ಥಳ ಎಷ್ಟು ಅಂತರದಲ್ಲಿ ಇರುತ್ತದೆ ಎಂದರೆ 30 ಅಡಿ ಅಂತರದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನೀವು ಅಪಘಾತವನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಮತ್ತು ಅಲ್ಲಿ ಆಟೋ ನಿಂತಿತ್ತು ಎಂದು ಸುಳ್ಳು

ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆಟೆ ರಿಕ್ಷಾ ಚಾಲಕನ ಅತೀವೇಗ ಹಾಗೂ ನಿರ್ಲಕ್ಷತನದಿಂದ ಅಪಘಾತವಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಚಾಸಾ–1 ರವರು ಸೃಷ್ಟಿ ಮಾಡಿಕೊಂಡ ಒಂದು ಸುಳ್ಳು ಪ್ರಕರಣಕ್ಕೆ ನೀವು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.